ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಡಾ. ಜಿ.ಎಸ್. ಶಿವರುದ್ರಪ್ಪನವರ ನೇತೃತ್ವದಲ್ಲಿ ನಡೆಸುತ್ತಿದ್ದ ವಾರ್ಷಿಕ ವಿಚಾರ ಸಂಕೀರ್ಣಗಳು ಕನ್ನಡ ಸಾಹಿತ್ಯ ಲೋಕದಲ್ಲಿ ನಡೆದ ಗಂಭೀರ ಚಿಂತನೆಗಳ ಸಂಕೇತವಾಗಿದ್ದವು. ಇಂಥ ಚರ್ಚೆ–ಚಿಂತನೆಗಳ ವೇದಿಕೆಯಲ್ಲಿ ಒಮ್ಮೆ ಚಂದ್ರಶೇಖರ ಪಾಟೀಲರು ಸಂಚಲನವನ್ನು 'ಸೃಷ್ಟಿ' ಮಾಡಿದರು. ಒಂದು ವಿಚಾರಗೋಷ್ಠಿಯಲ್ಲಿ ವಿಷಯ ಮಂಡನೆ ಮಾಡುತ್ತ 'ಪ್ರಜಾವಾಣಿ'ಯತ್ತ ಹೊರಳಿದರು. ಒಂದೆರಡು ಪತ್ರಿಕೆಗಳನ್ನು ಮುಂದಿನ ಮೇಜಿನ ಮೇಲೆ ಇಟ್ಟು ವಾಗ್ದಾಳಿ ನಡೆಸಿದರು. ಈ ಪತ್ರಿಕೆಯ ಕೆಲವು ಬರಹಗಳು ಮೇಲ್ಜಾತಿಯ ವಕ್ತಾರಿಕೆ ವಹಿಸಿವೆ ಎಂದು ಟೀಕಿಸಿದರು. ಅಂದಿನ ಗೋಷ್ಠಿಗೆ ನೇರ ಸಂಬಂಧವಿಲ್ಲದಿದ್ದರೂ ಪರೋಕ್ಷ ಸಂಬಂಧ ಕಲ್ಪಿಸಿ ಹೊರಬಿದ್ದ ಕಟುನುಡಿಗಳ ಮೊನಚು ಮತ್ತು 'ಧೈರ್ಯದರ್ಶನ'ಕ್ಕೆ ಸಭೆಯಲ್ಲಿ ಗಲಿಬಿಲಿ ಉಂಟಾಯಿತು. ಪರ–ವಿರೋಧದ ಮಾತುಗಳು ಬಂದವು. ಅನಂತರ ಮಧ್ಯಾಹ್ನ ನಡೆದ ಗೋಷ್ಠಿಯಲ್ಲಿ ಭಾಗವಹಿಸಿದ್ದ ಭಾಷಣಕಾರರಲ್ಲಿ ಈ 'ಅಪ್ರಸ್ತುತ ವಾಗ್ದಾಳಿ'ಗೆ ಪ್ರತಿಭಟನಾರ್ಥವಾಗಿ ತಾವು ವಿಷಯ ಮಂಡನೆ ಮಾಡುವುದಿಲ್ಲವೆಂದು ಹೇಳಿ ವೇದಿಕೆಯಿಂದ ಕೆಳಗಿಳಿದರು. ಈ ಪ್ರಕರಣದ ಹಿನ್ನೆಲೆ ಹೀಗಿದೆ: ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ನೇಮಕಾತಿಯಲ್ಲಿ 'ಮೆರಿಟ್'ಗೆ ಮನ್ನಣೆ ನೀಡದೆ ಪಕ್ಷಪಾತ ಮಾಡುತ್ತಿದೆಯೆಂದು 'ಪ್ರಜಾವಾಣಿ'ಯಲ್ಲಿ ಒಂದೆರಡು ಮುಖ್ಯ ಲೇಖನಗಳು ಬಂದಿದ್ದವು. ಅಂದಿನ ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರರಾವ್ ಅವರು ತಮ್ಮ 'ಛೂ ಬಾಣ' ಅಂಕಣದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಜಿ.ಎಸ್.ಎಸ್ ಕಡೆಗೆ ಬಾಣ ಬಿಟ್ಟಿದ್ದರು. ಇದೆಲ್ಲಕ್ಕೂ ಉತ್ತರವಾಗಿ ಚಂದ್ರಶೇಖರ ಪಾಟೀಲರು ವೇದಿಕೆಯಲ್ಲಿ ವಾಗ್ದಾಳಿ ನಡೆಸಿದ್ದರು! ಈ ವಿಷಯಗಳ ಸತ್ಯಾಸತ್ಯತೆಯ ಚರ್ಚೆಗೆ ಈ ಲೇಖನದ ವ್ಯಾಪ್ತಿ ಸೂಕ್ತವಲ್ಲ; ಸಕಾಲವೂ ಅಲ್ಲ. ನಾನಿಲ್ಲಿ ಹೇಳ ಹೊರಟಿದ್ದು ಚಂದ್ರಶೇಖರ ಪಾಟೀಲರ ಧೈರ್ಯ ಹಾಗೂ ವಿಶಿಷ್ಟ ವ್ಯಕ್ತಿತ್ವದ ಬಗ್ಗೆ ಮತ್ತು ಈ ಮೂಲಕವೇ ನನಗೆ ಅವರ ಮೊದಲ ದರ್ಶನವಾದದ್ದರ ಬಗ್ಗೆ ಮಾತ್ರ. ಆಗ ಒಂದಂತೂ ಅನ್ನಿಸಿತ್ತು: ಇವರು ಇಲ್ಲಿ ಬೇರೆಯವರ ಉದ್ದೇಶಕ್ಕೆ ಬಳಕೆಯಾದರು!

ಹಾಗಾದರೆ ಚಂದ್ರಶೇಖರ ಪಾಟೀಲರು ವಿನಾ ಕಾರಣ ಬೇರೆಯವರ ಬತ್ತಳಿಕೆಯ ಬಾಣವಾಗುವ ವ್ಯಕ್ತಿಯೇ? ಖಂಡಿತ ಅಲ್ಲ. ಅಂದು ಕೂಡ ಅವರೊಳಗೆ ಇದ್ದ ವೈದಿಕಶಾಹಿ ವಿರೋಧ ಕೆಲಸ ಮಾಡಿರಬೇಕು. ಆದರೆ, ಅದು ಶ್ರೇಣೀಕೃತ ಸಮಾಜಕ್ಕೆ ತೋರಿದ ಸೈದ್ಧಾಂತಿಕ ವಿರೋಧವಾಗದೆ ನಿರ್ದಿಷ್ಟ ಪ್ರಸಂಗ ಮತ್ತು ನಿರ್ದಿಷ್ಟ ಪತ್ರಿಕೆಯನ್ನು ಪ್ರಸ್ತಾಪಿಸಿದ್ದು ನಿಜ. ಅದೇನೇ ಇರಲಿ, ಚಂಪಾ ತಮಗೆ ಅನ್ನಿಸಿದ್ದನ್ನು ಯಾವುದೇ ಫಲಾಪೇಕ್ಷೆಯ ಸ್ವಾರ್ಥವಿಲ್ಲದೆ ಮುಲಾಜಿಲ್ಲದೇ ಹೇಳುವ ಮುಕ್ತ ಪ್ರತಿರೋಧದ ಪ್ರತೀಕವಾಗಿ ಬೆಳೆದದ್ದು ಈಗ ಇತಿಹಾಸ. ಈ ಇತಿಹಾಸದ ಆರಂಭ ಆದದ್ದು ನಾನು ಪ್ರಸ್ತಾಪಿಸಿದ ವಿಚಾರ ಸಂಕಿರಣದ ಪ್ರಸಂಗದಲ್ಲಿ ಎಂಬ ಕಾರಣಕ್ಕೆ 'ಚಂಪಾ' ವ್ಯಕ್ತಿತ್ವದ ಒಂದು ಭಾಗವಾಗಿ ಅದಕ್ಕೆ ಮಹತ್ವವಿದೆ. ಆದರೆ, ಚಂಪಾ ಅಷ್ಟಕ್ಕೇ ಸೀಮಿತವಾಗಲಿಲ್ಲವೆಂಬುದೇ ನನ್ನಂಥವರಿಗೆ ಸಂತೋಷದ ಹಾಗೂ ಸಮಾಧಾನದ ಸಂಗತಿ.

ಮುಂದೆ ನಾನು ನೋಡಿದ್ದು, ಯಾರದೋ ವಿಷಯಕ್ಕೆ ಬಾಯಾಗುವ 'ಚಂಪಾ' ಅವರನ್ನಲ್ಲ; ತನ್ನ ಅಂತರಾಳದ ಅನಿಸಿಕೆಗಳಿಗೆ ಅನ್ಯಾಯ ಮಾಡದೆ ಅಭಿವ್ಯಕ್ತಿ ನೀಡಿದ ದಿಟ್ಟದನಿಯ ಚಂಪಾ ಅವರನ್ನು. ಅವರು ನಮ್ಮ ಸಾಂಸ್ಕೃತಿಕ ಕ್ಷೇತ್ರದ ಮುಖಾಮುಖಿಯ ರೂಪಕವಾಗಿ ಬೆಳೆದರು. ನೀವು ಒಪ್ಪಬಹುದು, ಒಪ್ಪದಿರಬಹುದು, ತಾವು ಹೇಳಬೇಕಾದ್ದನ್ನು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಹೇಳಿಯೇ ತೀರುವೆನೆಂಬ ಅವರ ಸಂಕಲ್ಪದಲ್ಲಿ ಸ್ವಾರ್ಥ ಇರಲಿಲ್ಲ. ಸ್ವಾರ್ಥವಿದ್ದರೆ ಯಾರಿಗೆ ಬೇಕಾದರೂ ಎದುರಾಳಿಯಾಗುವ ವ್ಯಕ್ತಿತ್ವ ಇರುತ್ತಿರಲಿಲ್ಲ. ಪ್ರಸಂಗವೊಂದರಿಂದ ಪ್ರಕಟಗೊಂಡ ದಿಢೀರ್ ವಾಗ್ದಾಳಿಯ ರೋಚಕ ಸಂದರ್ಭದಿಂದ ಹೊರಬಂದ ಚಂಪಾ ಅವರು ಸಾಮಾಜಿಕ ಕ್ರಿಯಾಶೀಲತೆ